**ಅಸಲು ದಾವಾ ನಂಃ 112 /2023**
**ಪಿ.ಡಬ್ಲ್ಯೂಃ 2 ,**

**ದಿನಾಂಕ :10-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು:- ಶ್ರೀ. ಎಸ್.ಬಿ.ಎಮ್. ಪ್ರತಿವಾದಿ ಪರ ವಕೀಲರಿಂದ :**

ಜಗದೇವಪ್ಪ ಮತ್ತು ಆತನ ಕುಟುಂಬದವರು ನನಗೆ 40 ವರ್ಷಗಳಿಂದ ಗೊತ್ತು. ನಾನು ಅವರ ಸಂಬಂಧಿಕಳು ಅಲ್ಲಾ. ಜಗದೇವಪ್ಪನ ಸಮಬಂಧಪಟ್ಟಂತ ಆಸ್ತಿ ಗೊತ್ತಿಲ್ಲಾ. ಜಗದೇವಪ್ಪನ ಮನೆಗಳ ಬಗ್ಗೆ ಗೊತ್ತು. 1ನೇ ವಾದಿ ಮನೆ ನಂಬರ:1-2-134 ಮತ್ತು 1-2-135 ಎರಡು ಅಂತಸ್ತಿನ ಮನೆಯಲ್ಲಿ ವಾಸ ಇದ್ದಾರೆ. ಸದರಿ ಮನೆಯಲ್ಲಿ 1ನೇ ವಾದಿ ಹಿಟ್ಟಿನ ಗಿರಣಿ ನಡೆಸುತ್ತಾರೆ ಎಂದರೆ ಸರಿ. ಜಗದೇವಪ್ಪನ ಕುಟುಂಬದಲ್ಲಿ ಯಾವುದೇ ಪಾಲು ವಿಭಾಗ ಆದ ಬಗ್ಗೆ ನನಗೆ ಗೊತ್ತಿಲ್ಲಾ. ಜಗದೇವಪ್ಪ ಎಲ್ಲಾ ಆಸ್ತಿಗಳು ಒಟ್ಟು ಕುಂಟುಂಬದ ಆಸ್ತಿಗಳು ಇವೆ. 1ನೇ ವಾದಿ ವಾಸ ಇದ್ದ ಮನೆ ಜಗದೇವಪ್ಪನ ಕಾಲದಿಂದಲೂ ಇದೆ ಎಂದರೆ ಸರಿ. ಸದರಿ ಹಿಟ್ಟಿನ ಗಿರಣಿ ಜಗದೇವಪ್ಪ ಮರಣ ಹೊಂದುವ ಮುಂಚೆ ಇತ್ತು ಎಂದರೆ ಸರಿ. ಜಗದೇವಪ್ಪ ಮರಣ ಹೊಂದುವ ಮುಂಚೆ ಆತ ಮತ್ತು 1ನೇ ವಾದಿ ಹಿಟ್ಟಿನ ಗಿರಣಿ ನಡೆಸುತ್ತಿದ್ದರು ಎಂದರೆ ಸರಿ. ಜಗದೇವಪ್ಪನ ಮದುವೆ 1ನೇ ವಾದಿ ಜೊತೆಗೆ ಆದ ಬಗ್ಗೆ ನಾನು ಯಾವುದೇ ಲಗ್ನ ಪತ್ರಿಕೆ ನೋಡಿಲ್ಲಾ. ನಾನು ಲಗ್ನ ಪತ್ರ ನೋಡಿಲ್ಲಾ ಆದರೆ ಮದುವೆ ದಿ: 16-08-1998 ರಂದು ಆಗಿದೆ ಎಂದು 1ನೇ ವಾದಿಯಿಂದ ತಿಳಿದು ಬಂದಿದೆ. ಜಗದೇವಪ್ಪನ ಮೊದಲನೇ ಹೆಂಡತಿ ಮರಣ ಪ್ರಮಾಣ ಪತ್ರ ನೋಡಿಲ್ಲಾ. ಲಲಿತಾಬಾಯಿ ಇವರು 1996 ರಲ್ಲಿ ತೀರಿ ಹೋಗಿದ್ದಾರೆ ಎಂದು 1ನೇ ವಾದಿಯಿಂದ ತಿಳಿದು ಬಂದಿದೆ ಎಂದರೆ ಸರಿಯಲ್ಲ .

**ಅಸಲು ದಾವಾ ನಂಃ 112 /2023**
**ಪಿ.ಡಬ್ಲ್ಯೂಃ 2 ,**

1ನೇ ವಾದಿ ಜಗದೇವಪ್ಪ ನ ಜೊತೆಗೆ ಮದುವೆ ಆದಾಗ ಆತನ ಮೊದಲನೇ ಹೆಂಡತಿ ಲಿಲಿತಾಬಾಯಿ ಜೀವಂತ ಇದ್ದರು ಎಂದರೆ ಸರಿಯಲ್ಲ. ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿಲ್ಲಾ. ನನಗೆ ಸಾಕ್ಷಿ ನುಡಿಯಲು 1ನೇ ವಾದಿ ಕರೆದ ಕಾರಣ ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ. 1ನೇ ವಾದಿ ಮತ್ತು ನನಗೆ ಅನ್ಯೋನ್ಯ ಸಂಬಂಧ ಇದೆ ಎಂದರೆ ಸರಿ. ನನಗೆ ಮತ್ತು ವಾದಿ ಅನ್ಯೋನ್ಯ ಸಂಬಂಧ ಇದ್ದ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ 1ನೇ ವಾದಿಯ ಹೇಳಿಕೆ ಮೇರೆಗೆ ತಯಾರಿಸಲಾಗಿದೆ ಎಂದರೆ ಸರಿ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**